ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:–ಸಿ3(7)ಪ್ರಾ.ಶಿ.ವರ್ಗ 01/2016–17 ದಿ: 19/10/2016

## ಜ್ಞಾಪನ

ವಿಷಯ: 2016–17 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ:

******

**ಸರ್ಕಾರಿ ಪ್ರಾಥಮಿಕಶಾಲಾ ಸಹಶಿಕ್ಷಕರ ಅಂತರ ಘಟಕ – ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ**

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 20/10/2016<br>ಗುರುವಾರ | 5101 ರಿಂದ 5500 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ)<br>**ಪ್ರಾಥಮಿಕ ಶಾಲಾ** ಮುಖ್ಯಶಿಕ್ಷಕರು 1 ರಿಂದ 91<br>**ಪ್ರಾಥಮಿಕ ಶಾಲಾ** ಪಧವೀಧರೇತರ ಮುಖ್ಯ ಶಿಕ್ಷಕರು 1 ರಿಂದ 06<br>**ಪ್ರಾಥಮಿಕ ಶಾಲಾ** ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರು 1 ರಿಂದ 253<br>( ನಾಲ್ಕು ವಿಭಾಗಗಳು ಸೇರಿ) |
| 2 | 21/10/2016<br>ಶುಕ್ರವಾರ | 5501 ರಿಂದ 6000 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 3 | 22/10/2016<br>ಶನಿವಾರ | 6001 ರಿಂದ 6500 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

### ಕೌನ್ಸಿಲಿಂಗ್ ನಡೆಯುವ ಸ್ಥಳ:

**1. ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು –02**
**2. ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು**
**3. ಕಲಬುರ್ಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರ್ಗಿ.**
**4. ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ .**
**ಬೆಳಿಗ್ಗೆ: 09–30 ರಿಂದ ಪ್ರಾರಂಭ.**

**ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

1. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ.
2. ವೈದ್ಯಕೀಯ ಮತ್ತು ಅಂಗವಿಕಲ ಆದ್ಯತೆಯನ್ನು ಕೋರಿರುವ ಶಿಕ್ಷಕರು ಸಂಬಂಧಪಟ್ಟಂತೆ ಅವರ ಜಿಲ್ಲೆಯ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಬಿ.ಇ.ಓ / ಉಪನಿರ್ದೇಶಕರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ಪಡೆದ ಬಗ್ಗೆ ದೃಢೀಕರಣಪತ್ರ.
3. ನೇಮಕಾತಿ ಆದೇಶ ಪತ್ರ ಮತ್ತು ಕಳೆದ ಬಾರಿ ವರ್ಗಾವಣೆ ಪಡೆದಿದ್ದಲ್ಲಿ ವರ್ಗಾವಣಾ ಆದೇಶದ ಪ್ರತಿ.
4. ಶಿಕ್ಷಕರ ಇತ್ತೀಚಿನ ಹೆಚ್.ಆರ್. ಎಂ.ಎಸ್ ವೇತನ ಪತ್ರ.
5. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
6. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ
7. **ವಿಧವಾ ಪ್ರಕರಣ** ––– ಪತಿಯ ಮರಣ ಪ್ರಮಾಣ ಪತ್ರ.
8. **ಪತಿ/ಪತ್ನಿ ಅನುಧಾನಿತ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಹೆಚ್**.ಆರ್.ಎಂ.ಎಸ್ ವೇತನ ಪತ್ರ.
9. **ಸೈನಿಕ ಪ್ರಕರಣಗಳಲ್ಲಿ ಸಂಬಂಧಿಸಿದ ಪ್ರಾಧಿಕಾರ ನೀಡಿರುವ ಮೂಲ ಗುರಿತಿನ ಚೀಟಿ ಮತ್ತು ಸೇವಾ ದೃಢೀಕರಣ ಪತ್ರ.**
10. **ಶಿಕ್ಷಕರ ಸಂಘದ/ಸರ್ಕಾರಿ ನೌಕರರ ಸಂಘದ ಚುನಾಯಿತ ಪ್ರತಿನಿಧಿಯಾಗಿದ್ದಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರ. ಶಿಕ್ಷಕರು ಯಾವ ಘಟಕದಲ್ಲಿ ಚುನಾಯಿತರಾಗಿದ್ದಾರೆಂಬ ಬಗ್ಗೆ ದೃಢೀಕರಣ ಪತ್ರ.**
11. ಪತಿ–ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್)
12. ಕೆ.ಎ.ಟಿ ಯಿಂದ ಮಧ್ಯಂತರ ಆದೇಶವನ್ನು ಪಡೆದಿರುವ ಎಸ್.ಎಸ್.ಎ ಸಹಶಿಕ್ಷಕರು/ಎಸ್.ಎಸ್.ಎ–ಟಿ.ಜಿ.ಟಿ ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಾಗ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುವುದು.

ಸಹಿ/–
(ಕೆ. ಆನಂದ )
**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**
ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,